Now I have to touch Karnataka Housing Board ಅದಕ್ಕೆ ಅರ್ಧ ಗಂಟೆಯಾಗುತ್ತದೆ. If you are going to allow me Monday afternoon, I will be happy.

ಉಪಾಧ್ಯಕ್ಷರು : ಇನ್ನೊಂದು ವಿಷಯ ಮಾತನಾಡಿ ಮುಗಿಸಿಬಿಡಿ.

ಶ್ರೀ ಎನ್. ರಾಜಣ್ಣ : ಕಟ್‌ಡೌನ್ ಮಾಡಿದರೆ ನಾನು ತಪ್ಪುಗಳನ್ನು ಮಾಡಿಬಿಡುತ್ತೇನೆ. ನಾನು ಮಾತನಾಡಬೇಕಾಗಿರುವ ವಿಷಯಗಳನ್ನು ಬಗ್ಗೆ ಎಲ್ಲಾ ಬರೆದಿಟ್ಟಿದ್ದೇನೆ.

ಉಪಾಧ್ಯಕ್ಷರು : ಈ ಬಜೆಟ್ ಮೇಲೆಯೂ ಒಂದು ಅವಕಾಶ ಮಾಡಿ ಕೊಡುತ್ತೇನೆ. ಆಗ ತಾವು ಮಾತನಾಡಬಹುದು.

ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(1) ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕ, 1996

SRI M.C. NANAIAH (Minister for Law and Parliamentary Affairs and Information and publicity) : Sir, I beg to move:

``That the Karnataka Court Fees and Suits Valuation (Amendment) Bill, 1996 be taken into consideration".

The question was proposed.

ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಉಪಾಧ್ಯಕ್ಷರೇ, ಇವರು ಇಲ್ಲಿ ಬರೀ ಎರಡು ಸೆಕ್ಷನಗೆ ಅಮೆಂಡಮೆಂಟ್ ತಂದಿದ್ದರೂ ಕೂಡ ವಿಷಯ ಬಹಳ ಗಹನವಾಗಿದೆ. ಏಕೆಂದರೆ ಇದು ಬಡಜನರನ್ನು, ರೈತಾಪಿ ಜನರನ್ನು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುವ ಜನಗಳು ಕೊಡುವ ಫೀಜು. ಅವರ ದಿನನಿತ್ಯದ ದಾಖಿಲೆಗಳಲ್ಲಿ ತೆಗೆದುಕೊಳ್ಳುವುದಕ್ಕೆ , ಸಂಬಂಧಪಟ್ಟಂಥ ಮಸೂದೆ. ಇದರಲ್ಲಿ ಇದುವರೆಗೂ ಸರ್ಟಿಫೈಡ್ ಕಾಪಿ ತೆಗೆದುಕೊಳ್ಳುವುದಕ್ಕೆ ಕೂಡ 15 ರೂಪಾಯಿ ಇತ್ತು. ಇವರೇನು ಮಾಡಿದ್ದಾರೆ ಎಂದರೆ ಮೂರು ಪಟ್ಟು ಜಾಸ್ತಿಮಾಡಿಬಿಟ್ಟಿದ್ದಾರೆ. 15 ರಿಂದ 50 ರೂಪಾಯಿ. ಈಗ ಈ ಹಣವನ್ನು ಯಾರು ಕೊಡುವುದು? ಬಡವರು. ನೂರು ಪರಸೆಂಟ್ ಬಡವರು ಯಾರು ನೊಂದಿದ್ದಾರೋ ಅವವು ಕೊಡುವುದು. ನಾನು ತಿಳಿದುಕೊಂಡಿರುವ ಹಾಗೆ ತಾವೇನೂ ಲೀಗಲ್ ಏಡ್ ಅಧ್ಯಕ್ಷರು ಎಂದು ಕಾಣಿಸುತ್ತದೆ. ಈಗಿನ ಕಾಲ ಏನು ಎಂದರೆ ಬಡವರಿಗೆ ನ್ಯಾಯ ಪುಕ್ಕಟೆ ಸಿಗಬೇಕು. ಸಿಗುವ ಹಾಗೆ ಮಾಡಬೇಕು ಎಂದು ಸರ್ಕಾರ ಇವತ್ತು ಲೀಗಲ್ ಹೆಡ್ ಸೆಲ್‌ಗಳನ್ನು ಪ್ರಾರಂಭ ಮಾಡಿದೆ. ಲೀಗಲ್ ಎಡ ಸ್ಟಾರ್ಟ ಮಾಡಿ ಅದರ ಅಧ್ಯಕ್ಷರು ನೀವೇ ಆಗಿ ಲಾಯರುಗಳಿಗೆ ದುಡ್ಡು ಕೊಟ್ಟು ಕೇಸುಗಳನ್ನು ಪುಕ್ಕಟೆ ನಡೆಸುವ ಕಾಲದೊಳಗೆ ನೀವು

ಈ ಅಮೆಂಡ್‌ಮೆಂಟ್ ತಂದು ಬಡಜನರ ಮೇಲೆ it affects the poor farmers, SCs/STs and backward classes ಇದನ್ನು ತಾವು ಆಲೋಚನೆ ಮಾಡಬೇಕಾಗಿತ್ತು. ಅದಕ್ಕೋಸ್ಕರವಾಗಿ ನ್ಯಾಯವಾಗಿ ನೋಡಿದರೆ ನಕಲುಗಳನ್ನು ತೆಗೆದುಕೊಳ್ಳುವುದಕ್ಕೆ, ಎಕ್ಸ್‌ಟ್ರಾಕ್ಟ್ ತೆಗೆದುಕೊಳ್ಳುವುದಕ್ಕೆ, ಎಕ್ಸಟ್ರಾಕ್ಟ್ ತೆಗೆದುಕೊಳ್ಳುವುದಕ್ಕೆ ಇವರು ಅಲೆದಾಡಿ, ಬಸ್ ಸಿಗದೇ ಗ್ರಾಮಾಂತರ ಪ್ರದೇಶಗಳಿಂದ ಬಂದಿರುತ್ತಾರೆ. ಇದರ ಜೊತೆಗೆ ಇನ್ನು 50 ರೂಪಾಯಿ ಜಾಸ್ತಿ ಹಾಕುತ್ತೀರಾ ಅವರಿಗೆ. You must have sympathy towards rural folk. ತಾವು ತಂದಿರುವ ಈ ಮಸೂದೆಯ ಅವಶ್ಯಕತೆ ಇರಲಿಲ್ಲ. ಏನು ಅಂಥ ದೊಡ್ಡ ರೆವಿನ್ಯೂ ಬರುತ್ತದೆ? ಈಗ ಹೇಳಿ. ನಾನು ಹೇಳುತ್ತೇ ಕೇಳಿ. ಫೈನಾನ್ಷಿಯಲ್ ಮೆಮೊರಾಂಡಂನಲ್ಲಿ ತಾವು ಹೇಳಬೇಕಾಗಿತ್ತು. ಅದನ್ನು ಒಪ್ಪಿಕೊಳ್ಳುತ್ತಿದ್ದೆ. ಏನು ಕೋಟಿಗಟ್ಟಲೆ ಬರುತ್ತದೆಯೇ? ಇದನ್ನೆಲ್ಲಾ ಟಚ್ ಮಾಡುತ್ತಾರೆಯೇ?

6.10 ಪಿ.ಎಂ

ತಾವು ಹೇಳಿ ಲಾ ಮಿನಿಸ್ಟರ್ ಇಂತಹವನೆಲ್ಲಾ ಯಾರಾದರೂ ಟಚ್ ಮಾಡುತ್ತಾರೋ? ಅದಕ್ಕೋಸ್ಕರವಾಗಿ ನಾನು ಇದನ್ನು ಖಂಡಿತವಾಗಿ ವಿರೋಧಿಸುತ್ತೇನೆ. ನಾವು ನಿನ್ನೆ ಸ್ಪೀಕರ್ ಅವರ ಹತ್ತಿರ ಮಾತನಾಡಿದ್ದೇವೆ, ಎರಡಕ್ಕೆ ಒಪ್ಪಿಕೊಂಡಿದ್ದೇವೆ, ಎರಡಕ್ಕೆ ಮಸೂದೆಗೆ ಮಾತ್ರ ಪಾಸ್ ಮಾಡಿಕೊಡುತ್ತೇರೆ. ದಯಮಾಡಿ ಕ್ಷಮಿಸಬೇಕು. ಇಂದು ಬಡವರ್ ಬಿಲ್ ಅದಕ್ಕೋಸ್ಕರ ವಿರೋಧಿಸುತ್ತೇನೆ. ಇದನ್ನು ನೀವು ತರಬಾರದಿತ್ತು. ಇತ್ತೀಚೆಗೆ ಏನಾಗಿದೆ ಮಾತೆತ್ತಿದರೆ ಒಂದು ಬಿಲ್ , ಯಾರಾದರೂ ಇಂಡಿಯಾ ದೇಶದೊಳಗೆ ಇಂತಹ ಬಿಲ್ ತರುತ್ತಾರೋ ನೀವು ಹೇಳಿ ಸ್ವಾಮಿ? ಏತಕ್ಕೆ? ಫ್ರೀ ಲೀಗಲ್ ಏಡ್ ಕೊಡಬೇಕೆಂದು ನೀವೇ ಪಟ್ಟು ಹಿಡಿದು ಕೋರ್ಟಗಳಲ್ಲಿ ಹೋರಾಡುತ್ತೀರಿ. ನೀವೇ ಪ್ರತಿಯೊಂದು ಕೋರ್ಟ್‌ಗಳಲ್ಲಿ ಕೂಡ ಲಾಯರ್‌ಗಳನ್ನು ಇಟ್ಟುಕೊಂಡಿದ್ದು ಇವತ್ತು ಬಿಲ್ ತಂದು ನೀನು ಬಡವ 50-50 ರೂಪಾಯಿ ಕೊಕ ಎಂದರೆ ಹೇಳಿದರೆ ಜಮಾ ಬಾಕಿ ಖರ್ಚಾ ಇದು, ಲಾಭ ನಷ್ಟದ ವ್ಯಾಪಾರವೇ? ಅವರಿಗೆ ಫ್ರೀ ಲೀಗಲ್ ಏಡ್ ಕೊಡಬೇಕು? ದಯಮಾಡಿ ಯೋಚನೆ ಮಾಡಿ ವಾಪಸ್ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಸಭಾಧ್ಯಕ್ಷರೆ, ಮಹಾರಾಷ್ಟ್ರದಲ್ಲಿ ಈಗ ಒಂದು ಕಾನೂನು ಇದೆ. ಯಾವುದೇ ಮಹಿಳೆ ಕೋರ್ಟಿಗೆ ಹೋದರೆ ಕೋರ್ಟ ಫೀ ಕೊಡಬೇಕಾಗಿಲ್ಲ ಎಂದು ಹೇಳಿ, ಅದೇ ಪ್ರಕಾರ ನಮ್ಮ ನ್ಯಾಯಾಧೀಶರೂ ಕೂಡ ತಮಗೆ ಈಗಾಗಲೇ ಪತ್ರಬರೆದಿದ್ದಾರೆ. ಅದೇ ರೀತಿ ಕರ್ನಾಟಕದಲ್ಲಿ ಕೂಡ ತಾವು ತರಬೇಕು. ಅಂತಹ ಸಮಯದಲ್ಲಿ ಈ 50 ರೂಪಾಯಿ ಹೆಚ್ಚಿಗೆ ಮಾಡುವುದು ಉಚಿತವಲ್ಲ. ತಾವು ದಯವಿಟ್ಟು ಮಹಾರಾಷ್ಟ್ರದಲ್ಲಿ ಮಹಿಳೆಯರು ಕೋರ್ಟ ಫೀ ಕೊಡಬೇಕಾಗಿಲ್ಲ ಎನ್ನುವ ಕಾನೂನು ಏನು ತಂದಿದ್ದಾರೋ ಅದನ್ನು ಯೋಚಿಸಿ ಇಲ್ಲೂ ಕೂಡ ತರಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಸಭಾಧ್ಯಕ್ಷರೇ, ಕೆಲವು ಮಸೂದೆಗಳನ್ನು ನಾವು ತರುತ್ತೇವೆ. ಚರ್ಚೆ ಮಾಡಲಿಕ್ಕೆ ಅದು

ಯೋಗ್ಯವಾಗಿದ್ದರೆ ಅದನ್ನು ಚರ್ಚೆ ಮಾಡೋಣ. 1958ನೆಯ ಇಸವಿಯಲ್ಲಿ ಕೋರ್ಟ್ ಫೀಸ್ ಅಂಡ್ ಸೂಟ್ ವ್ಯಾಲುಯೇಷನ್ ಆಕ್ಟ್‌ನಲ್ಲಿ 15 ರೂಪಾಯಿ ಇತ್ತು. ಆ 15 ರೂಪಾಯಿ ಇವತ್ತು ಸುಮಾರು 40 ವರ್ಷ ಹತ್ತಿರ ಆಯಿತು, ಈಗ ಪರಿಸ್ಥಿತಿ ಏನಾಗಿದೆ ಎಂದು ತಂದರೆ 15 ರೂಪಾಯಿ ಇದ್ದುದನ್ನು 50 ರೂಪಾಯಿಗೆ ಏರಿಸಿದ್ದೇವೆ. ಕೋರ್ಟ್‌ಗಳಲ್ಲಿ ಆಗುತ್ತಾ ಇರತಕ್ಕ ಕೆಲಸ, ಅದಕ್ಕೆ ಖರ್ಚು ಮಾಡತಕ್ಕ ಹಣ ಮತ್ತು ಅದರಿಂದ ನಮಗೆ ಏನೂ ಆದಾಯ ಬರುತ್ತಾ ಇರತಕ್ಕದ್ದು ಅಲ್ಲ. It is not a revenue earning Department, as all of you know. ಮತ್ತು ನಮಗೆ ಎಕ್ಸಪೆಂಚರ್ ಎಂದು ಹೇಳುತ್ತಿರತಕ್ಕದ್ದು Let me tell you it is mounting year by year. The amount which we have increased is hardly minimum from Rs. 15 to Rs. 50 ಆದ್ದರಿಂದ ನಾನು ತಮ್ಮನ್ನು ಕೇಳುತ್ತಿದ್ದೇನೆ. Give you approval. Ultimately this money will be ploughed back into the judiciary only and not for anything else. I will certainly keep in mind what Mrs . Prameela has said about giving exemption to ladies relating to the proceedings in the Court and the Court fee, I will certainly keep it in view and when time comes I will bring appropriate legislation.

ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕ, 1996

ಪರ್ಯಾಲೋಚನಾ ಪ್ರಸ್ತಾವ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ : "1996ರ ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಉಪಾಧ್ಯಕ್ಷರು : "ಖಂಡ 2 ಮತ್ತು 3 ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತವೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ:

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಹೆಸರು ಮತ್ತು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಹೆಸರು ಮತ್ತು ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವ ಅಂಗೀಕಾರ

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1996 ರ ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯನಿಗದಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ:

"1996ರ ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗಧಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(2) ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ 1996 ಪರ್ಯಾರೋಚನಾ ಪ್ರಸ್ತಾವ

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1996ರ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತ್ತು.

ಶ್ರೀ ಎಂ. ಸಿ .ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಇದು ನ್ಯಾಯವಾದಿಗಳ ಒಂದು ಕಲ್ಯಾಣ ನಿಧಿ. ನಮ್ಮ ಕರ್ನಾಟಕ ಬಾರ್ ಕೌನ್ಸಿಲನಲ್ಲಿರತಕ್ಕಂತಹ ಅಧ್ಯಕ್ಷರು ಮತ್ತು ಆಡಳಿತ ಮಂಡಲಿಯ ಸದಸ್ಯರ ಜೊತೆಯಲ್ಲಿ ನಾನು ಚರ್ಚೆ ಮಾಡಿದಾಗ ಇದಕ್ಕೆ ಕೆಲವು ತಿದ್ದುಪಡಿಗಳನ್ನು ತರಬೇಕೆಂದೇ ಅವರೇ ಸಲಹೆ ಮಾಡಿದರು. ಆ ತಿದ್ದುಪಡಿಗಳಲ್ಲಿ ಪ್ರಾಮುಖ್ಯವಾಗಿರತಕ್ಕದ್ದು ಯಾವುದು ಎಂದರೆ ಒಂದು ಈಗ ಇರತಕ್ಕ ಸದಸ್ಯತ್ವ ಶುಲ್ಕವನ್ನು ಹೆಚ್ಚಿಸಬೇಕೆಂದು ಎಂದು ಹೇಳುತ್ತಿರತಕ್ಕದ್ದು. 100 ರೂಪಾಯಿಯಿಂದ ಒಂದು ಸಾವಿರ ರೂಪಾಯಿಯವರೆಗೆ. ಅದನ್ನು ಅವರೇ ಸೂಚಿಸಿರತಕ್ಕದ್ದು, ನಾವಲ್ಲ. ಕಡೆಗೆ ಈಗ ಕೊಡುತ್ತಿರತಕ್ಕ 50 ಸಾವಿರ ರೂಪಾಯಿ, ಎಲ್ಲಾದರೂ ಯಾವುದಾದರೂ